


بسم اللهِ الرّحمٰن الرّحيم

# ದೈವಿಕ ಏಕತೆಯನ್ನು ಸ್ಥಾಪಿಸುವಲ್ಲಿ ಪವಿತ್ರ ಪ್ರವಾದಿ ಮುಹಮ್ಮದ್(ಸ)ರ ಮಾದರಿ

(ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಯು.ಕೆ.ಯ ಇಸ್ಲಾಮಾಬಾದ್‌ನ **'ಮಸ್ಜಿದ್ ಮುಬಾರಕ್'** ನಿಂದ **27-02-2026** ರಂದು ನೀಡಿದ **ಜುಮುಅ ಖುತ್‌ಬದ ಸಾರಾಂಶ**)

أَشْهَدُ أَنْ لَّا إِلٰهَ إِلَّا اللهُ وَحْدَهُ لَا شَرِيْكَ لَهُ وَأَشْهَدُ أَنَّ مُحَمَّدًا عَبْدُهُ وَرَسُوْلُهُ۔

أَمَّا بَعْدُ فَأَعُوْذُ بِاللهِ مِنَ الشَّيْطٰنِ الرَّجِيْمِ۔ بِسْمِ اللهِ الرَّحْمٰنِ الرَّحِيْمِ۔

اَلْحَمْدُ لِلّٰهِ رَبِّ الْعَالَمِيْنَ۔ اَلرَّحْمٰنِ الرَّحِيْمِ۔ مٰلِكِ يَوْمِ الدِّيْنِ۔ اِيَّاكَ نَعْبُدُ وَاِيَّاكَ نَسْتَعِيْنُ۔

اِهْدِنَا الصِّرَاطَ الْمُسْتَقِيْمَ۔ صِرَاطَ الَّذِيْنَ اَنْعَمْتَ عَلَيْهِمْ غَيْرِ الْمَغْضُوْبِ عَلَيْهِمْ وَلَا الضَّآلِّيْنَ۔

*(ತಶಹ್ಹುದ್, ತಅವ್ವುಧ್, ಸೂರತುಲ್ ಫಾತಿಹ ಪಠಿಸಿದ ನಂತರ ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್ ಅಯ್ಯದಹುಲ್ಲಾಹು ತಆಲಾ ಬಿನಸ್‌ರಿಹಿಲ್ ಅಝೀಝ್, ಹೀಗೆ ಹೇಳಿದರು:)*

ಲೋಕದಲ್ಲಿ ಎಲ್ಲ ಪ್ರವಾದಿಗಳು ದೈವಿಕ ಏಕತ್ವವನ್ನು (ತೌಹೀದ್) ಸ್ಥಾಪಿಸಲೆಂದೇ ಬಂದಿದ್ದರು ಮತ್ತು ಅವರು ತಮ್ಮ ಜನಾಂಗಗಳಿಗೆ ಇದನ್ನೇ ಕಲಿಸಿಕೊಟ್ಟರು. ಹಝ್ರತ್ ಪೈಗಂಬರ್(ಸ) ಕೂಡ ಇದೇ ಸಂದೇಶವನ್ನು ತಂದರು ಮತ್ತು ಇದೇ ಕಾರ್ಯವನ್ನು ಮುಂದುವರಿಸಲು ಆಗಮಿಸಿದರು. ಅವರು ಶಿರ್ಕ್ (ಬಹುದೇವಾರಾಧನೆ) ವಿರುದ್ಧ ಆಧಾರರಹಿತವಾಗಿ ಹೋರಾಟ ನಡೆಸಿರಲಿಲ್ಲ, ಬದಲಾಗಿ ಶಿರ್ಕ್‌ನ ಕೆಡುಕನ್ನು ವಿವರಿಸಿದರು ಮತ್ತು ಅದನ್ನು ಮನವರಿಕೆ ಮಾಡಿಸಿಕೊಂಡು ಅದನ್ನು ವಿರೋಧಿಸುವಂತೆ ಮಾಡಿದರು. ಹಝ್ರತ್ ಪೈಗಂಬರ್(ಸ)ರ ಅನುಯಾಯಿಗಳ ಮೇಲೆ ಅವರ ಈ ಬೋಧನೆಯು ಬಹಳ ಪರಿಣಾಮಕಾರಿಯಾಗಿರಲು ಕಾರಣವೇನೆಂದರೆ, ಹಝ್ರತ್ ಪೈಗಂಬರ್(ಸ)ರ ಪ್ರತಿಯೊಂದು ಮಾತು ಮತ್ತು ಕೃತಿಯು ಆ ಬೋಧನೆಯ ನೈಜ ಚಿತ್ರಣವಾಗಿತ್ತು.

ಇತರ ಜನಾಂಗಗಳು ತಮ್ಮ ಪ್ರವಾದಿಗಳ ಸಮಾಧಿಗಳನ್ನು ಪೂಜಾಸ್ಥಳವನ್ನಾಗಿ ಮಾಡಿಕೊಂಡಿದ್ದ ರೀತಿಯಲ್ಲಿ ಮುಸ್ಲಿಂ ಸಮುದಾಯದಲ್ಲಿಯೂ ಈ ಭೀಕರ ಪಾಪವು ಹುಟ್ಟಿಕೊಳ್ಳಬಾರದು ಎಂಬ ಚಿಂತೆ ಹಝ್ರತ್ ಪೈಗಂಬರ್(ಸ)ರಿಗೆ ಇರುತ್ತಿತ್ತು. ಪವಿತ್ರ ಖುರ್‌ಆನಿನಲ್ಲಿ ಪದೇ ಪದೇ ವಿವಿಧ ರೀತಿಯಲ್ಲಿ ನಮಗೆ ತೌಹೀದ್‌ನ ಬೋಧನೆ ನೀಡಲಾಗಿದೆ.

ಉದಾಹರಣೆಗೆ, ಅಲ್ಲಾಹನು ಸೂರಾ ಅಂಬಿಯಾದಲ್ಲಿ ಹೀಗೆ ಹೇಳುತ್ತಾನೆ: **'ವಮಾ ಅರ್‌ಸಲ್‌ನಾ ಮಿನ್ ಖಬ್‌ಲಿಕ ಮಿರ್‍ರಸೂಲಿನ್ ಇಲ್ಲಾ ನೂಹೀ ಇಲೈಹಿ ಅನ್ನಹೂ ಲಾ ಇಲಾಹ ಇಲ್ಲಾ ಅನಾ ಫಅ್‌ಬುದೂನ್'** ಅಂದರೆ: 'ಖಂಡಿತವಾಗಿಯೂ ನನ್ನ ಹೊರತು ಬೇರೆ ದೇವನಿಲ್ಲ; ಆದುದರಿಂದ ನನ್ನನ್ನು ಮಾತ್ರ ಆರಾಧಿಸಿರಿ' ಎಂದು ದಿವ್ಯ ಸಂದೇಶ ನೀಡದೆ ನಿನಗಿಂತ ಮುಂಚೆ ಯಾವ ಸಂದೇಶವಾಹಕನನ್ನೂ ನಾವು ಕಳುಹಿಸಲಿಲ್ಲ.

ಪವಿತ್ರ ಖುರ್‌ಆನಿನ ಕೊನೆಯಲ್ಲಿ ಅಲ್ಲಾಹನು ತನ್ನ ಏಕತ್ವವನ್ನು (ತೌಹೀದ್) ಘೋಷಿಸುತ್ತಾ ಹೀಗೆ ಹೇಳುತ್ತಾನೆ: **'ಖುಲ್ ಹುವಲ್ಲಾಹು ಅಹದ್. ಅಲ್ಲಾಹುಸ್ಸಮದ್. ಲಮ್ ಯಲಿದ್ ವಲಮ್ ಯೂಲದ್. ವಲಮ್ ಯಕುಲ್ಲಹೂ ಕುಫುವನ್ ಅಹದ್'** (ಅಲ್ ಇಖ್‌ಲಾಸ್: 2-5). ಅಂದರೆ: 'ಹೇಳು, ಅವನು ಅಲ್ಲಾಹನು; ಏಕನು. ಅಲ್ಲಾಹನು ನಿರಪೇಕ್ಷನು. ಅವನು ಜನಕನಲ್ಲ; ಜಾತನೂ ಅಲ್ಲ. ಅವನಿಗೆ ಸಮನಾಗಿ ಯಾರೂ ಇಲ್ಲ.' ಇಲ್ಲಿ ಅಲ್ಲಾಹನು ಎಲ್ಲ ರೀತಿಯ ಶಿರ್ಕ್‌ನ (ಪಾಲುದಾರಿಕೆಯ) ನಿರಾಕರಣೆಯನ್ನು ಘೋಷಿಸಿದ್ದಾನೆ. ಹಝ್ರತ್ ಪೈಗಂಬರ್(ಸ)ರ ಸಹಜಗುಣವು ಎಷ್ಟೊಂದು ಪವಿತ್ರವಾಗಿತ್ತೆಂದರೆ, ತೌಹೀದ್‌ನ ಪ್ರೀತಿಯು ಅವರ ನರನಾಡಿಗಳಲ್ಲಿ ಅಂತರ್ಗತವಾಗಿತ್ತು.

(ಹುಝೂರ್ ಹೇಳಿದರು:) ಹಝ್ರತ್ ಪೈಗಂಬರ್(ಸ)ರ ಜೀವನಚರಿತ್ರೆಯ ಕೆಲವು ಘಟನೆಗಳನ್ನು ನಾನು ನಿಮ್ಮ ಮುಂದಿರಿಸುತ್ತೇನೆ. ಹಝ್ರತ್ ಉಮ್ಮು ಐಮನ್(ರ) ವಿವರಿಸುತ್ತಾರೆ: 'ಬುವಾನಾ' ಎಂಬ ಹೆಸರಿನ ಒಂದು ವಿಗ್ರಹವಿತ್ತು, ಖುರೈಶಿಯರು ಅದನ್ನು ಬಹಳವಾಗಿ ಗೌರವಿಸುತ್ತಿದ್ದರು. ಅದರ ಬಳಿ ಹಾಜರಾಗುತ್ತಿದ್ದರು. ಅಬೂತಾಲಿಬ್ ಕೂಡ ತಮ್ಮ ಜನರೊಂದಿಗೆ ಅಲ್ಲಿಗೆ ಹೋಗುತ್ತಿದ್ದರು ಮತ್ತು ರಸೂಲುಲ್ಲಾಹ್(ಸ)ರನ್ನು ತಮ್ಮೊಂದಿಗೆ ಕರೆದುಕೊಂಡು ಹೋಗಲು ಬಯಸುತ್ತಿದ್ದರು, ಆದರೆ ಅವರು ನಿರಾಕರಿಸುತ್ತಿದ್ದರು. ಒಮ್ಮೆ ತಮ್ಮ ಸೋದರತ್ತೆಯರ ತೀವ್ರ ಒತ್ತಾಯದ ಮೇರೆಗೆ ಹಝ್ರತ್ ಪೈಗಂಬರ್(ಸ) ಅಲ್ಲಿಗೆ ಹೋದರು, ಆದರೆ ತೀವ್ರವಾಗಿ ಭಯಭೀತರಾಗಿ ಹಿಂದಿರುಗಿದರು ಮತ್ತು ಹೀಗೆ ಹೇಳಿದರು: 'ನಾನಲ್ಲಿ ಒಂದು ವಿಚಿತ್ರ ದೃಶ್ಯವನ್ನು ಕಂಡೆ. ನಾನು ಆ ವಿಗ್ರಹದ ಬಳಿ ಹೋಗಲು ಯತ್ನಿಸಿದಾಗ ಬಿಳಿ ಬಟ್ಟೆ ಧರಿಸಿದ್ದ ಒಬ್ಬ ವ್ಯಕ್ತಿ ಹೀಗೆ ಕೂಗಿ ಹೇಳಿದರು: 'ಹೇ ಮುಹಮ್ಮದ್, ಹಿಂದೆ ಸರಿಯಿರಿ ಮತ್ತು ಈ ವಿಗ್ರಹವನ್ನು ಮುಟ್ಟಬೇಡಿರಿ.'

ಪ್ರವಾದಿಯಾಗಿ ನಿಯೋಜಿಸಲ್ಪಡುವ ಮೊದಲು, ಹಝ್ರತ್ ಪೈಗಂಬರ್(ಸ) ಏಕದೇವನ ಆರಾಧನೆಗಾಗಿ ಮಕ್ಕಾದಿಂದ ಮೂರು ಮೈಲಿ ದೂರದಲ್ಲಿರುವ ಹಿರಾ ಗುಹೆಗೆ ಹೋಗುತ್ತಿದ್ದರು. ಇತ್ತೀಚಿನ ದಿನಗಳಲ್ಲಿ ಅದನ್ನು 'ಜಬಲುನ್ನೂರ್' ಎಂದು ಕರೆಯಲಾಗುತ್ತದೆ. ನಬಿಕರೀಮ್(ಸ)ರಿಗೆ ನಲವತ್ತು ವರ್ಷ ಪ್ರಾಯವಾದಾಗ, ಒಂದು ದಿನ ಜಿಬ್ರೀಲ್(ಅ) ಪ್ರತ್ಯಕ್ಷರಾದರು ಮತ್ತು ನಬಿ(ಸ)ರ ಮೇಲೆ ಮೊದಲ ದಿವ್ಯವಾಣಿ ಅವತೀರ್ಣವಾಯಿತು. ಮೊದಲ ದಿವ್ಯವಾಣಿಯೊಂದಿಗೆ ಹಝ್ರತ್ ಪೈಗಂಬರ್(ಸ) ಜನರನ್ನು ಏಕದೇವನ ಕಡೆಗೆ ಕರೆಯಲು ಮತ್ತು ಶಿರ್ಕ್ ವಿರುದ್ಧ ಬೋಧನೆ ನೀಡಲು ಆರಂಭಿಸಿದರು.

ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ: 'ನಮ್ಮ ನಬಿ(ಸ) ಸತ್ಯವನ್ನು ಪ್ರಕಟಿಸಲು ಬಂದ ಮಹಾನ್ ಸುಧಾರಕರಾಗಿದ್ದರು, ಅವರು ಕಳೆದುಹೋಗಿದ್ದ ಸತ್ಯವನ್ನು ಪುನಃ ಲೋಕಕ್ಕೆ ತಂದರು. ಈ ಘನತೆಯ ವಿಷಯಯಲ್ಲಿ ನಮ್ಮ ನಬಿ(ಸ)ರೊಂದಿಗೆ ಬೇರೆ ಯಾವ ಪ್ರವಾದಿಯೂ ಪಾಲುದಾರರಲ್ಲ. ಅವರು ಇಡೀ ಲೋಕವನ್ನು ಅಂಧಕಾರದಲ್ಲಿ ಕಂಡರು ಮತ್ತು ಅವರ ಆಗಮನದಿಂದ ಆ ಕತ್ತಲೆಯು ಪ್ರಕಾಶವಾಗಿ ಬದಲಾಯಿತು. ಹಝ್ರತ್ ಪೈಗಂಬರ್(ಸ) ಯಾವ ಜನಾಂಗದಲ್ಲಿ ಆಗಮಿಸಿದರೋ, ಆ ಇಡೀ ಜನಾಂಗವು ಶಿರ್ಕ್‌ನ ಹೊದಿಕೆಯನ್ನು ಕಳಚಿ ತೌಹೀದ್‌ನ ಉಡುಪನ್ನು ಧರಿಸುವವರೆಗೂ ಅವರು ಮರಣ ಹೊಂದಲಿಲ್ಲ. ಅಷ್ಟೇ ಅಲ್ಲದೆ, ಆ ಜನರು ಸತ್ಯವಿಶ್ವಾಸದ ಅತ್ಯುನ್ನತ ಹಂತಗಳನ್ನು ತಲುಪಿದರು ಮತ್ತು ಸತ್ಯ, ನಿಷ್ಠೆ ಹಾಗೂ ದೃಢನಂಬಿಕೆಯ ಎಂತಹ ಕಾರ್ಯಗಳು ಅವರಿಂದ ಪ್ರಕಟವಾದವೆಂದರೆ ಅದರ ಉದಾಹರಣೆಯು ಲೋಕದ ಯಾವುದೇ ಭಾಗದಲ್ಲಿ ಕಂಡುಬರುವುದಿಲ್ಲ. ಇಷ್ಟೊಂದು ಮಹತ್ತಾದ ಯಶಸ್ಸು ಹಝ್ರತ್ ಪೈಗಂಬರ್(ಸ)ರನ್ನು ಹೊರತುಪಡಿಸಿ ಬೇರೆ ಯಾವ ಪ್ರವಾದಿಗೂ ಲಭಿಸಲಿಲ್ಲ. ಲೋಕವು ಅತ್ಯಂತ ತೀವ್ರವಾದ ಅಂಧಕಾರದಲ್ಲಿ ಮುಳುಗಿದ್ದ ಕಾಲದಲ್ಲಿ ಹಝ್ರತ್ ಪೈಗಂಬರ್(ಸ) ನಿಯೋಜಿಸಲ್ಪಟ್ಟಿದ್ದರು ಎಂಬುದೇ ಅವರ ಪ್ರವಾದಿತ್ವಕ್ಕೆ ಒಂದು ದೊಡ್ಡ ಪುರಾವೆಯಾಗಿದೆ. ತದನಂತರ, ಲಕ್ಷಾಂತರ ಜನರು ಶಿರ್ಕ್ ಮತ್ತು ವಿಗ್ರಹಾರಾಧನೆಯನ್ನು ಬಿಟ್ಟು ತೌಹೀದ್ ಮತ್ತು ಸನ್ಮಾರ್ಗವನ್ನು ಅಳವಡಿಸಿಕೊಂಡಿದ್ದ ಸಮಯದಲ್ಲಿ ಹಝ್ರತ್ ಪೈಗಂಬರ್(ಸ) ಲೋಕದಿಂದ ನಿರ್ಗಮಿಸಿದರು. ನಿಸ್ಸಂದೇಹವಾಗಿ, ನಮ್ಮ ನಬಿ(ಸ) ಆಧ್ಯಾತ್ಮಿಕತೆಯನ್ನು ಸ್ಥಾಪಿಸುವ ದೃಷ್ಟಿಯಿಂದ ಎರಡನೇ ಆದಮ್ ಆಗಿದ್ದರು, ವಾಸ್ತವದಲ್ಲಿ, ನಿಜವಾದ ಆದಮ್ ಅವರೇ ಆಗಿದ್ದರು, ಅವರ ಮೂಲಕ ಮತ್ತು ಅವರ ಕೃಪೆಯಿಂದ ಮಾನವೀಯತೆಯ ಎಲ್ಲ ಸದ್ಗುಣಗಳು ಪರಿಪೂರ್ಣತೆಯನ್ನು ತಲುಪಿದವು.'

(ಹುಝೂರ್ ಹೇಳಿದರು:) ದುಃಖದ ಸಂಗತಿಯೇನೆಂದರೆ, ಇಂದು ಮುಸ್ಲಿಮ್ ಸಮುದಾಯ ಕೂಡ ಹಝ್ರತ್ ಪೈಗಂಬರ್(ಸ) ನಮಗೆ ಉಪದೇಶಿಸಿದ ತೌಹೀದ್‌ನ ಉನ್ನತ ಮಟ್ಟವನ್ನು ವಿಸ್ಮರಿಸುತ್ತಿದೆ. ಪರಿಶುದ್ಧ ತೌಹೀದನ್ನು ಮರೆತಿರುವ ಕಾರಣ, ಒಬ್ಬ ಮುಸ್ಲಿಮನ ಲಕ್ಷಣವಾಗಿರಬೇಕಿದ್ದ ಅಲ್ಲಾಹನ ಗುಣಗಳ ಮೇಲಿನ ಪರಿಶುದ್ಧವಾದ ನಂಬಿಕೆಯೂ ಉಳಿದಿಲ್ಲ. ಇಂತಹ ಪರಿಸ್ಥಿತಿಯಲ್ಲಿ, ತೌಹೀದನ್ನು ಅರ್ಥಮಾಡಿಕೊಂಡು ತಮ್ಮೊಳಗೆ ವಿಶೇಷವಾದ ಬದಲಾವಣೆಗಳನ್ನು ಉಂಟುಮಾಡಿಕೊಳ್ಳುವುದು ಹಝ್ರತ್ ಪೈಗಂಬರ್(ಸ)ರ ಸತ್ಯಸಂಧ ಸೇವಕರಾದ ಹಝ್ರತ್ ಮಸೀಹ್ ಮೌಊದ್(ಅ)ರನ್ನು ನಂಬುವವರ ಕರ್ತವ್ಯವಾಗಿದೆ.

(ಹುಝೂರ್ ಹೇಳಿದರು:) 'ಇದು ಆರಾಧನೆಯ ವಿಶೇಷ ತಿಂಗಳಾಗಿದೆ. ರಮಝಾನಿನಲ್ಲಿ ಇದಕ್ಕಾಗಿ ವಿಶೇಷವಾಗಿ ಪ್ರಯತ್ನಿಸಬೇಕು ಮತ್ತು ಇದಕ್ಕಾಗಿ ದುಆ ಮಾಡಬೇಕು. ನಮಗೆ ಹಝ್ರತ್ ಪೈಗಂಬರ್(ಸ)ರೊಂದಿಗೆ ಪ್ರೀತಿಯಿದೆ ಎಂಬ ವಾದವಿರುವುದಾದರೆ, ಅವರು ತಮ್ಮ ಇಡೀ ಜೀವನದಲ್ಲಿ ತೌಹೀದ್ ಸ್ಥಾಪನೆಗಾಗಿ ಶ್ರಮಿಸಿದ ಹಾಗೆಯೇ ನಾವು ಕೂಡ ಅದಕ್ಕಾಗಿ ವಿಶೇಷ ಪ್ರಯತ್ನ ಮಾಡಬೇಕಾಗುವುದು.

ಹಝ್ರತ್ ಮುಸ್ಲಿಹ್ ಮೌಊದ್(ರ) ಹೇಳುತ್ತಾರೆ: 'ಪವಿತ್ರ ಖುರ್‌ಆನಿನಲ್ಲಿ ಅಲ್ಲಾಹನು ಹಝ್ರತ್ ಪೈಗಂಬರ್(ಸ)ರೊಡನೆ ಹೀಗೆ ಹೇಳುತ್ತಾನೆ – 'ಹೇ ಮುಹಮ್ಮದ್, (ರಸೂಲುಲ್ಲಾಹ್(ಸ)) ನೀನು ಲೋಕದ ಮೂಲೆ ಮೂಲೆಯ ಜನರನ್ನು ಎಚ್ಚರಿಸು, ಆದರೆ ಮೊದಲು ನಿನ್ನ ಹತ್ತಿರದ ಸಂಬಂಧಿಗಳಿಗೆ ಮುನ್ನೆಚ್ಚರಿಕೆ ನೀಡು. ಏಕೆಂದರೆ ಅವರಿಗೆ ನಿನ್ನ ಮೇಲೆ ಇಮ್ಮಡಿ ಹಕ್ಕಿದೆ.' ಅದರಂತೆ ಮುಹಮ್ಮದ್ ರಸೂಲುಲ್ಲಾಹ್(ಸ) ಈ ದೈವಿಕ ಆದೇಶವನ್ನು ಪಾಲಿಸುತ್ತಾ ಮಕ್ಕಾದಲ್ಲಿದ್ದ ರೂಢಿಯಂತೆ 'ಸಫಾ' ಬೆಟ್ಟದ ಮೇಲೆ ನಿಂತು ವಿವಿಧ ಬುಡಕಟ್ಟುಗಳ ಹೆಸರನ್ನು ಕರೆಯಲಾರಂಭಿಸಿದರು. ಮಕ್ಕಾದ ಜನರು ಜಮಾಯಿಸಿದಾಗ, ರಸೂಲ್(ಸ) ಹೇಳಿದರು: 'ನೋಡಿರಿ, ಈ ಬೆಟ್ಟದ ಹಿಂದೆ ಒಂದು ದೊಡ್ಡ ಸೈನ್ಯವು ಜಮಾಯಿಸಿದೆ ಮತ್ತು ಅದು ನಿಮ್ಮ ಮೇಲೆ ದಾಳಿ ಮಾಡಲು ಬಯಸುತ್ತಿದೆ ಎಂದು ನಾನು ನಿಮ್ಮೊಡನೆ ಹೇಳಿದರೆ, ನೀವು ನನ್ನ ಮಾತನ್ನು ನಂಬುತ್ತೀರಾ?' ಜನರು ಹೇಳಿದರು: 'ಏಕಿಲ್ಲ, ಖಂಡಿತವಾಗಿಯೂ ನಾವು ನಿಮ್ಮ ಮಾತನ್ನು ನಂಬುತ್ತೇವೆ, ಏಕೆಂದರೆ ನಾವು ಯಾವಾಗಲೂ ನಿಮ್ಮನ್ನು ಸತ್ಯವಂತರಾಗಿ ಕಂಡಿದ್ದೇವೆ.' ಆಗ ಹಝ್ರತ್ ಪೈಗಂಬರ್(ಸ) ಹೇಳಿದರು: 'ಜನರೇ ಕೇಳಿರಿ, ನಾನು ನಿಮಗೆ ಒಂದು ಪ್ರಮುಖ ಸುದ್ದಿ ತಲುಪಿಸುತ್ತೇನೆ. ನನ್ನನ್ನು ಅಲ್ಲಾಹನ ಕಡೆಯಿಂದ ಪ್ರವಾದಿಯನ್ನಾಗಿ ಮಾಡಿ ಕಳುಹಿಸಲಾಗಿದೆ. ನೀವು ಅಲ್ಲಾಹನ ಶಿಕ್ಷೆಯಿಂದ ಸುರಕ್ಷಿತರಾಗಿರಲು ಬಯಸುವುದಾದರೆ, ನನ್ನನ್ನು ಅನುಸರಿಸಿರಿ.' ಅವರು ಹೀಗೆ ಹೇಳಿದ ಕೂಡಲೇ ಅಬೂಲಹಬ್ ಆವೇಶದಿಂದ ಹೀಗೆ ಹೇಳಿದನು: 'ನಿನಗೆ ವಿನಾಶ,

(ನಊಧುಬಿಲ್ಲಾಹ್) ಇಷ್ಟೊಂದು ಸಣ್ಣ ವಿಷಯಕ್ಕಾಗಿ ನೀನು ನಮ್ಮನ್ನು ಒಟ್ಟುಸೇರಿಸಿದ್ದೆಯಾ?' ಅದೇ ರೀತಿಯಲ್ಲಿ ಇತರ ಜನರು ಕೂಡ ಅಪಹಾಸ್ಯ ಮಾಡುತ್ತಾ ಹೊರಟುಹೋದರು.'

ಹಝ್ರತ್ ಮಸೀಹ್ ಮೌಊದ್[ಅ] ಹೇಳುತ್ತಾರೆ: 'ಅಲ್ಲಾಹನ ಕಡೆಯಿಂದ ಒಬ್ಬ ನಬಿ ಅಥವಾ ರಸೂಲ್ ನಿಯೋಜಿಸಲ್ಪಡುವಾಗ ಅವರ ಅನುಯಾಯಿಗಳು ನಿಪುಣತೆಯುಳ್ಳವರಾಗಿ, ಸತ್ಯವಂತರಾಗಿ, ಧೈರ್ಯಶಾಲಿಗಳಾಗಿ ಮತ್ತು ಪ್ರಗತಿ ಹೊಂದುವವರಾಗಿ ಕಾಣಲ್ಪಡುವಾಗ ಅಲ್ಲಿರುವ ಜನಾಂಗಗಳ ಮತ್ತು ಪಂಗಡಗಳ ಜನರ ಹೃದಯಗಳಲ್ಲಿ ಅವರ ಬಗ್ಗೆ ಖಂಡಿತವಾಗಿಯೂ ಒಂದು ರೀತಿಯ ದ್ವೇಷ ಮತ್ತು ಅಸೂಯೆ ಹುಟ್ಟಿಕೊಳ್ಳುತ್ತದೆ... ಇದು ಹಝ್ರತ್ ಪೈಗಂಬರ್[ಸ]ರ ಕಾಲದಲ್ಲಿ ಮುಶ್ರಿಕ್, ಯಹೂದಿ ಹಾಗೂ ಕ್ರೈಸ್ತ ವಿದ್ವಾಂಸರನ್ನು ಸತ್ಯವನ್ನು ಸ್ವೀಕರಿಸುವುದರಿಂದ ವಂಚಿತರನ್ನಾಗಿ ಮಾಡಿತು, ಅಷ್ಟೇ ಅಲ್ಲ ಅದು ಅವರನ್ನು ಕಠಿಣ ವಿರೋಧವನ್ನು ಮಾಡಲು ಪ್ರೇರೇಪಿಸಿತು. ಆದ್ದರಿಂದ ಅವರು ಇಸ್ಲಾಮನ್ನು ಹೇಗಾದರೂ ಲೋಕದ ನಕ್ಷೆಯಿಂದಲೇ ಅಳಿಸಿಹಾಕಬೇಕು ಎಂಬ ಚಿಂತೆಯಲ್ಲಿದ್ದರು. ಇಸ್ಲಾಮಿನ ಆರಂಭಿಕ ದಿನಗಳಲ್ಲಿ ಮುಸ್ಲಿಮರು ಅಲ್ಪಸಂಖ್ಯಾತರಾಗಿದ್ದ ಕಾರಣ, ಅವರ ವಿರೋಧಿಗಳು ಮುಸ್ಲಿಮರೊಂದಿಗೆ, ಅಂದರೆ ಸಹಾಬಿಯರೊಂದಿಗೆ ಕಠಿಣ ವಿರೋಧದಿಂದ ವರ್ತಿಸಿದರು.'

ಹಝ್ರತ್ ಮುಸ್ಲಿಹ್ ಮೌಊದ್[ರ] ಹೇಳುತ್ತಾರೆ: 'ವಿರೋಧವು ತೀವ್ರವಾಯಿತು. ರಸೂಲ್[ಸ] ಮತ್ತು ಅವರ ಸಹಾಬಿಯರು ಮಕ್ಕಾದ ಜನರಿಗೆ ಅಲ್ಲಾಹನ ಈ ಸಂದೇಶವನ್ನು ತಲುಪಿಸಲು ಪ್ರಾರಂಭಿಸಿದರು: 'ಈ ಲೋಕವನ್ನು ಸೃಷ್ಟಿಸಿದ ದೇವನು ಒಬ್ಬನೇ ಆಗಿದ್ದಾನೆ. ಅವನ ಹೊರತು ಬೇರೆ ಆರಾಧ್ಯನಿಲ್ಲ. ಎಲ್ಲ ಪ್ರವಾದಿಗಳು ತೌಹೀದನ್ನು ಘೋಷಿಸುತ್ತಿದ್ದರು ಮತ್ತು ತಮ್ಮ ಜನಾಂಗದವರನ್ನು ಸಹ ಇದೇ ಬೋಧನೆಯ ಕಡೆಗೆ ಕರೆಯುತ್ತಿದ್ದರು. ನೀವು ಸಹ ಆ ಏಕೈಕ ದೇವನ ಮೇಲೆ ನಂಬಿಕೆಯಿಡಿರಿ. ಈ ಕಲ್ಲಿನ ವಿಗ್ರಹಗಳನ್ನು ಬಿಟ್ಟುಬಿಡಿರಿ, ಅವು ಪೂರ್ಣವಾಗಿಯೂ ನಿರುಪಯುಕ್ತ. ದೇವನ ಏಕತ್ವವನ್ನು (ತೌಹೀದ್) ಬಿಟ್ಟ ಕಾರಣ ನಿಮ್ಮ ಆಲೋಚನೆಗಳು ಮಲಿನವಾಗಿವೆ ಮತ್ತು ಹೃದಯಗಳು ಕತ್ತಲಾಗಿವೆ ಎಂಬುದನ್ನು ನೀವು ಗಮನಿಸುವುದಿಲ್ಲವೇ? ನಿಮಗೆ ಹಲಾಲ್ ಮತ್ತು ಹರಾಮಿನ ವ್ಯತ್ಯಾಸ ಗೊತ್ತಾಗುತ್ತಿಲ್ಲ. ಒಳಿತು ಮತ್ತು ಕೆಡುಕುಗಳ ನಡುವೆ ವ್ಯತ್ಯಾಸ ಗುರುತಿಸಲು ನಿಮಗೆ ಸಾಧ್ಯವಾಗುತ್ತಿಲ್ಲ. ನೀವು ನಿಮ್ಮ ತಾಯಂದಿರನ್ನು ಅಪಮಾನಿಸುತ್ತೀರಿ. ನಿಮ್ಮ ಸಹೋದರಿಯರು ಮತ್ತು ಹೆಣ್ಣುಮಕ್ಕಳ ಮೇಲೆ ದೌರ್ಜನ್ಯ ಮಾಡುತ್ತೀರಿ ಮತ್ತು ಅವರಿಗೆ ಅವರ ಹಕ್ಕುಗಳನ್ನು ನೀಡುವುದಿಲ್ಲ. ನಿಮ್ಮ ಹೆಂಡತಿಯರೊಂದಿಗೆ ನಿಮ್ಮ ನಡವಳಿಕೆ ಸರಿಯಿಲ್ಲ. ಅನಾಥರ ಹಕ್ಕುಗಳನ್ನು ಕಸಿದುಕೊಳ್ಳುತ್ತೀರಿ ಮತ್ತು ವಿಧವೆಯರೊಂದಿಗೆ ಕೆಟ್ಟದಾಗಿ ವರ್ತಿಸುತ್ತೀರಿ' ಎಂದು ಬೋಧಿಸಿದರು. ಅವರು ಹೇಳಿದರು: 'ಅಲ್ಲಾಹನ ಸಾಮೀಪ್ಯವನ್ನು ಗಳಿಸಲು ಇರುವ ವಿಧಾನವೇನೆಂದರೆ, ಪ್ರತಿಯೊಬ್ಬ ಹಕ್ಕುದಾರನಿಗೂ ಅವನ ಹಕ್ಕನ್ನು ನೀಡಿರಿ. ಮಹಿಳೆಯರನ್ನು ಗೌರವಿಸಿರಿ ಮತ್ತು ಅವರ ಹಕ್ಕುಗಳನ್ನು ಪೂರೈಸಿರಿ. ಅನಾಥರನ್ನು ಅಲ್ಲಾಹನ ಅಮಾನತ್ತು ಎಂದು ಪರಿಗಣಿಸಿಕೊಂಡು ಅವರ ಪರಿಪಾಲನೆಯನ್ನು ಉನ್ನತ ಮಟ್ಟದ ಪುಣ್ಯವೆಂದು ಭಾವಿಸಿರಿ. ವಿಧವೆಯರಿಗೆ ಆಸರೆಯಾಗಿರಿ. ಕೇವಲ ನ್ಯಾಯ ಮತ್ತು ನೀತಿ ಮಾತ್ರವಲ್ಲ, ಬದಲಾಗಿ ಕರುಣೆ ಮತ್ತು ಉಪಕಾರ ಮಾಡುವುದನ್ನು ನಿಮ್ಮ ಸಹಜಗುಣವನ್ನಾಗಿ ಮಾಡಿಕೊಳ್ಳಿರಿ.'

ಮಕ್ಕಾದ ಜನರ ಒಲವು ಇಸ್ಲಾಮಿನ ಕಡೆಗೆ ಹೆಚ್ಚಾಗತೊಡಗಿದಾಗ, ಒಂದು ದಿನ ಮಕ್ಕಾದ ನಾಯಕರು ಒಟ್ಟುಸೇರಿ ಅಬೂತಾಲಿಬ್‌ರ ಬಳಿಗೆ ಬಂದು ಹೀಗೆ ಹೇಳಿದರು: 'ನೀವು ನಮ್ಮ ನಾಯಕರಾಗಿದ್ದೀರಿ ಮತ್ತು ನಿಮ್ಮ ಸಲುವಾಗಿ ನಾವು ಮುಹಮ್ಮದ್[ಸ]ರೊಡನೆ ಏನನ್ನೂ ಹೇಳುತ್ತಿಲ್ಲ. ಈಗ ನಿಮ್ಮೊಂದಿಗೆ ಅಂತಿಮ ನಿರ್ಧಾರ ಮಾಡುವ ಸಮಯ ಬಂದಿದೆ. ನೀವು ಅವರಿಗೆ ತಿಳಿಹೇಳಿರಿ ಮತ್ತು ಅವರು ನಮ್ಮಿಂದ ಏನನ್ನು ಬಯಸುತ್ತಾರೆ ಎಂದು ಕೇಳಿರಿ. ಅವರ ಆಸೆ ಗೌರವ ಪಡೆಯುವುದಾಗಿದ್ದರೆ ಅಥವಾ ಸಂಪತ್ತು ಗಳಿಸುವುದಾಗಿದ್ದರೆ, ನಾವು ಅದಕ್ಕೆ ಸಿದ್ಧರಿದ್ದೇವೆ. ಅವರಿಗೆ ಮದುವೆಯಾಗುವ ಇಚ್ಛೆಯಿದ್ದರೆ, ಮಕ್ಕಾದಲ್ಲಿ ಅವರಿಗೆ ಇಷ್ಟವಾದ ಯಾವುದೇ ಹುಡುಗಿಯನ್ನು ಅವರೊಂದಿಗೆ ವಿವಾಹ ಮಾಡಿಕೊಡಲು ನಾವು ಸಿದ್ಧರಿದ್ದೇವೆ. ಅವರು ನಮ್ಮ ವಿಗ್ರಹಗಳನ್ನು ದೂಷಿಸುವುದನ್ನು ಬಿಡಬೇಕು ಎಂಬುದಷ್ಟೇ ನಮ್ಮ ಬೇಡಿಕೆ. ಒಂದು ವೇಳೆ ಅವರು ನಮ್ಮ ಪ್ರಸ್ತಾಪವನ್ನು ಒಪ್ಪುವುದಿಲ್ಲವೆಂದಾದರೆ, ಎರಡರಲ್ಲಿ ಒಂದನ್ನು ಆರಿಸಿಕೊಳ್ಳಬೇಕಾಗುವುದು. ಒಂದೋ ನೀವು ನಿಮ್ಮ ಸೋದರಳಿಯನನ್ನು ಕೈಬಿಡಬೇಕಾಗುವುದು, ಇಲ್ಲದಿದ್ದರೆ ಸಮುದಾಯವು ನಿಮ್ಮ ನಾಯಕತ್ವವನ್ನು ತಿರಸ್ಕರಿಸುವುದು.'

ಅಬೂತಾಲಿಬ್ ರಸೂಲುಲ್ಲಾಹ್[ಸ]ರನ್ನು ಕರೆದು ಹೀಗೆ ಹೇಳಿದರು: 'ಹೇ ನನ್ನ ಸಹೋದರ ಪುತ್ರಾ, ನನ್ನ ಜನರು ನನ್ನ ಬಳಿ ಈ ಸಂದೇಶವನ್ನು ತಂದಿದ್ದಾರೆ.' ಆಗ ಹಝ್ರತ್ ಪೈಗಂಬರ್[ಸ] ಹೇಳಿದರು: 'ಹೇ ನನ್ನ ಚಿಕ್ಕಪ್ಪ, ನೀವು ನಿಮ್ಮ ಜನಾಂಗವನ್ನು ಬಿಟ್ಟುಬಿಡಿರಿ ಮತ್ತು ನನಗೆ ಬೆಂಬಲ ನೀಡಿರಿ ಎಂದು ನಾನು ಹೇಳುವುದಿಲ್ಲ. ಆದರೆ ಏಕದೇವನ ಆಣೆ, ಒಂದು ವೇಳೆ ಇವರು ಸೂರ್ಯನನ್ನು ನನ್ನ ಬಲಗೈ ಮೇಲೆ ಮತ್ತು ಚಂದ್ರನನ್ನು ನನ್ನ ಎಡಗೈ ಮೇಲೆ ತಂದಿರಿಸಿದರೂ ನಾನು ಅಲ್ಲಾಹನ ತೌಹೀದ್‌ನ ಪ್ರಚಾರ ಮಾಡುವುದನ್ನು ನಿಲ್ಲಿಸಲಾರೆ. ಅಲ್ಲಾಹನು ನನಗೆ ಮರಣವನ್ನು ನೀಡುವವರೆಗೂ ನಾನು ನನ್ನ ಕೆಲಸದಲ್ಲಿ ನಿರತನಾಗಿರುತ್ತೇನೆ.' ನಿಷ್ಠೆಯಿಂದ ತುಂಬಿದ್ದ ಈ ಉತ್ತರವು ಅಬೂತಾಲಿಬ್‌ರ ಕಣ್ಣು ತೆರೆಸಲು

ಸಾಕಾಗಿತ್ತು. ಅವರು ಹೇಳಿದರು: **'ಹೇ ನನ್ನ ಸೋದರ ಪುತ್ರಾ, ಹೋಗು, ನೀನು ನಿನ್ನ ಕರ್ತವ್ಯವನ್ನು ನಿರ್ವಹಿಸುತ್ತಿರು. ಜನರು ನನ್ನನ್ನು ಕೈಬಿಡಲು ಬಯಸಿದರೆ ಬಿಡಲಿ, ನಾನು ನಿನ್ನನ್ನು ಬಿಡುವುದಿಲ್ಲ.'**

ತೌಹೀದ್‌ನ ಸ್ಥಾಪನೆಗಾಗಿ ಹಝ್ರತ್ ಪೈಗಂಬರ್(ಸ) ಮತ್ತು ಸಹಾಬಿಯರು ಮಕ್ಕಾದ ಸತ್ಯನಿಷೇಧಿಗಳಿಂದ ಎಲ್ಲ ರೀತಿಯ ಕ್ರೂರತೆ ಮತ್ತು ದೌರ್ಜನ್ಯಗಳನ್ನು ಸಹಿಸಿಕೊಂಡರು. ಮಕ್ಕಾದ ಸತ್ಯನಿಷೇಧಿಗಳಂತೆ ಇಂದೂ ಯಾವ ಜನಾಂಗಗಳಲ್ಲಿ ಈ ಕೆಡುಕುಗಳಿವೆಯೋ, ಅವು ತೌಹೀದ್‌ನಿಂದ ದೂರವಿರುವ ಕಾರಣದಿಂದಲೇ ಆಗಿದೆ. ತೌಹೀದನ್ನು ಘೋಷಿಸುತ್ತಲೇ ಇರುವುದು ನಮ್ಮ ಕರ್ತವ್ಯವಾಗಿದೆ. ನಾವು ತೌಹೀದ್‌ನ ಸಂದೇಶವನ್ನು ತಲುಪಿಸುವುದರ ಜೊತೆಗೆ ನಮ್ಮ ಆಧ್ಯಾತ್ಮಿಕ ಮತ್ತು ನೈತಿಕ ಸ್ಥಿತಿಗಳಲ್ಲಿ ಸಹ ಸ್ಪಷ್ಟವಾದ ಬದಲಾವಣೆಯನ್ನು ತರಲು ಪ್ರಯತ್ನಿಸಬೇಕು. ಅಲ್ಲಾಹನು ನಮಗೆ ಅದರ ಸೌಭಾಗ್ಯವನ್ನು ನೀಡಲಿ.

——————————*****——————————

اَلْحَمْدُلِلّٰهِ نَحْمَدُهٗ وَنَسْتَعِيْنُهٗ وَنَسْتَغْفِرُهٗ وَنُؤْمِنُ بِهٖ وَنَتَوَكَّلُ عَلَيْهِ وَنَعُوْذُ بِاللّٰهِ
مِنْ شُرُوْرِ اَنْفُسِنَا وَمِنْ سَيِّئَاتِ اَعْمَالِنَا مَنْ يَّهْدِهِ اللّٰهُ فَلَا مُضِلَّ لَهٗ وَمَنْ يُّضْلِلْهُ
فَلَاهَادِيَ لَهٗ ۔ وَنَشْهَدُ اَنْ لَّآ اِلٰهَ اِلَّا اللّٰهُ وَنَشْهَدُاَنَّ مُحَمَّدًا عَبْدُهٗ وَرَسُوْلُهٗ
عِبَادَ اللّٰهِ رَحِمَكُمُ اللّٰهُ اِنَّ اللّٰهَ يَأْمُرُ بِالْعَدْلِ وَالْاِحْسَانِ وَاِيْتَاءِ ذِی الْقُرْبٰى
وَيَنْهٰى عَنِ الْفَحْشَآءِ وَالْمُنْكَرِ وَالْبَغْيِ يَعِظُكُمْ لَعَلَّكُمْ تَذَكَّرُوْنَ ۝ اُذْكُرُوا اللّٰهَ
يَذْكُرْكُمْ وَادْعُوْهُ يَسْتَجِبْ لَكُمْ وَلَذِكْرُ اللّٰهِ اَكْبَرُ.


***Friday Sermon delivered by Hadrath Khaleefatul Masih Al Khamis****(atba)*

At, ***'Masjid Mubarak',*** *Islamabad, Tilford,* U.K. On 27-02-2026

**Summarized by** *Majlis Ansarullah Bharat*

***Kannada Translation****:* Moulavi Inamullah for Kannada Desk, Qadian

***Reviewed by****:* M.P Ibrahim | ***Layout****:* Basheer K.P. Manjeshwar

***Published By****:* Kannada Isha'at Team for Nazarath Nashr-O-Isha'ath, Qadian

***Email****:* *khutuba.kannada@gmail.com*

**You can find all the Sermons archived at**: www.alislam.org/friday-sermon